(ಇಂದು ದಿಃ 04.01.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ಎಸ್ ಬಿ ಬಿ ವಕೀಲರಿಂದ,**

ಈ ದಾವೆಯನ್ನು ಯಾರು ಯಾರ ವಿರುದ್ಧ ದಾಖಲಿಸಿದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಈ ದಾವೆಯನ್ನು ಜಾಗಕ್ಕೆ ಸಂಬಂಧಿಸಿ ಸಲ್ಲಿಸಲಾಗಿರುತ್ತದೆ. ದಾವಾ ಸ್ವತ್ತು ಯಾವ ಗ್ರಾಮದಲ್ಲಿ ಮತ್ತು ಯಾವ ಸರ್ವೆ ನಂಬರನಲ್ಲಿ ಇದೆ ಎಂದು ನನಗೆ ಹೇಳಲು ಆಗುವುದಿಲ್ಲ. ದಾವಾ ಸರ್ವೆ ನಂಬರನಲ್ಲಿ ಯಾರ ಯಾರಿಗೆ ಎಷ್ಟೆಷ್ಟು ಕ್ಷೇತ್ರ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು 1 ನೇ



ಓ.ಎಸ್. ನಂಬರಃ 20/2020

ಪಿ ಡಬ್ಲ್ಯೂ 2

ವಾದಿಯ ತಂಗಿಯ ಗಂಡನಾಗಿರುತ್ತೇನೆ. ನಾನು ಸದ್ರಿ ಸಂಬಂಧ ನಾತೆಯಿಂದ ಸಾಕ್ಷಿ ನುಡಿಯಲು ಬಂದಿರುತ್ತೇನೆ. ನಾನು ದಾವಾ ಆಸ್ತಿಗೆ ಸಂಬಂಧಿಸಿದ ದಾಖಲಾತಿಗಳನ್ನು ನೋಡಿರುವುದಿಲ್ಲ. ಅದೇ ರೀತಿ ದಾವಾ ಆಸ್ತಿಯ ದಿಕ್ಕುಗಳಲ್ಲಿ ಯಾರ ಯಾರ ಆಸ್ತಿಗಳು ಇವೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಉತ್ತರಕ್ಕೆ ಏನು ಇರುತ್ತದೆ ಅಂತಾ ನನಗೆ ಹೇಳಲು ಆಗುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸುವಾಗ ಈ ಮೇಲೆ ಹೇಳಿದ ವಿಚಾರವನ್ನೇ ಹೇಳಿರುತ್ತೇನೆ.

ನಿಮಗೆ ಈ ದಾವೆಯ ಬಗ್ಗೆ ಏನು ಗೊತ್ತಿಲ್ಲದೇ ಇದ್ದರೂ ಸಹ ನೀವು ವಾದಿಯ ಮುಲಾಜಿಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ, ಭಟ್ಕಳ**